# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

☎:08352-229051 www.kswu.ac.in Fax: 08352 -229057

ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್–92/2016–17/1213 ದಿನಾಂಕ:27–07–2016

ಗೆ,
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ**: ದಿನಾಂಕ:16–07–2016 ರಂದು ಮುಂಜಾನೆ 11:00ಗಂಟೆಗೆ ವಿಶ್ವವಿದ್ಯಾಲಯದ "ಜ್ಞಾನಶಕ್ತಿ (ತೊರವಿ) ಆವರಣ ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ: 16–07–2016ರಂದು ಮುಂಜಾನೆ: 11:00ಗಂಟೆಗೆ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ **"2016–17ನೇ ಹಣಕಾಸು ಸಾಲಿನ ಮೂರನೆಯ ಹಾಗೂ 92ನೇ ಸಿಂಡಿಕೇಟ್ ಸಾಮಾನ್ಯ ಸಭೆಯ"** ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ

– **Sd** –

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
**ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ**

**ಅಡಕ: ನಡವಳಿಗಳು 1 ರಿಂದ 14ಪುಟಗಳು**

**ಪ್ರತಿಗಳು:–**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಅಪರ ಮುಖ್ಯ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.

# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20–6–2016 | |
| 2. | 1(ಬಿ) | ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ಅಜೀಜ ಮಕಾಂದಾರ, ಡೀನರು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು | 28–10–2015 | 27–10–2016 |
| 5. | 1(ಇ) | ಡಾ.ಸರಸ್ವತಿ.ಎಸ್ | ಸದಸ್ಯರು | 01–12–2014 | 09-02–2017 |
| 6. | 1(ಇ) | ಡಾ.ಶ್ರೀನಿವಾಸ ಬಳ್ಳಿ | ಸದಸ್ಯರು | 01–12–2014 | 10–04–2017 |
| 7. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 8. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 9. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 10. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19–02–2015 | |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19–02–2015 | |
| 13. | 1(ಜಿ) | ಡಾ.ಫರ್‌ಜಾನಾ.ಎಂ | ಸದಸ್ಯರು | 19–02–2015 | |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19–02–2015 | |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19–02–2015 | |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19–02–2015 | |
| 17. | 1(ಹೆಚ್) | ಪ್ರೊ.ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | ಸದಸ್ಯರು | 01–06–2016 | 31–05–2017 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | ಪ್ರಕರಣ 18(2) | ಪ್ರೊ.ವಿ.ವಿ.ಮಳಗಿ, ಕುಲಸಚಿವರು(ಮೌ) | ಸದಸ್ಯರು | 14–7–2016 | |
| 22. | ಪ್ರಕರಣ 17(2) | ಪ್ರೊ. ಕೆ.ಪಿ.ಶ್ರೀನಾಥ, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 18–06–2016 | |

# ದಿನಾಂಕ:16-07-2016ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ರವರು ಎಲ್ಲ ಸದಸ್ಯರನ್ನು ಆತ್ಮೀಯದಿಂದ ಸ್ವಾಗತಿಸಿ, ಸ್ವ-ಪರಿಚಯ ಮಾಡಿಕೊಡಲು ತಿಳಿಸಿದರು. ಅದರಂತೆ ಎಲ್ಲ ಸದಸ್ಯರು ತಮ್ಮ ತಮ್ಮ ಸ್ವ-ಪರಿಚಯ ಮಾಡಿಕೊಟ್ಟ ನಂತರ ಕಾರ್ಯಸೂಚಿಯನ್ನು ಮಂಡಿಸಲು ಸಹಕಾರವನ್ನು ಕೋರಿದರು.

**ಸಭೆಗೆ ಹಾಜರಾದ ಸದಸ್ಯರು**

1. ಪ್ರೊ. ಸಬಿಹಾ, ಕುಲಪತಿಗಳು : ಸಭಾಧ್ಯಕ್ಷರು
2. ಪ್ರೊ. ಅಜೀಜ ಮಕಾಂದಾರ, ಡೀನರು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ : ಸದಸ್ಯರು
3. ಡಾ.ಸರಸ್ವತಿ ಎಸ್ : ಸದಸ್ಯರು
4. ಡಾ.ಶ್ರೀನಿವಾಸ ಬಳ್ಳಿ : ಸದಸ್ಯರು
5. ಡಾ.ಸತ್ಯಾನಂದ ಪಾತ್ರೋಟ : ಸದಸ್ಯರು
6. ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ : ಸದಸ್ಯರು
7. ಡಾ.ಫರ್‌ಜಾನಾ ಎಂ : ಸದಸ್ಯರು
8. ಡಾ.ಸುಜಾತಾ ಜಂಗಮಶೆಟ್ಟಿ : ಸದಸ್ಯರು
9. ಶ್ರೀ ಆರ್.ಬಿ.ಭಾವಿಕಟ್ಟಿ : ಸದಸ್ಯರು
10. ಶ್ರೀ ಆರ್.ಸಿ.ಪಾಟೀಲ : ಸದಸ್ಯರು
11. ಪ್ರೊ. ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ : ಸದಸ್ಯರು
12. ಪ್ರೊ.ವಿ.ವಿ.ಮಳಗಿ, ಕುಲಸಚಿವರು (ಮೌಲ್ಯಮಾಪನ) : ಸದಸ್ಯರು
13. ಪ್ರೊ.ಕೆ.ಪಿ.ಶ್ರೀನಾಥ, ಕುಲಸಚಿವರು : ಸದಸ್ಯ ಕಾರ್ಯದರ್ಶಿ

**ಸಭೆಗೆ ಗೈರು ಹಾಜರಾದ ಸದಸ್ಯರು**

1. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
4. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
5. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
6. ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬೆಂಗಳೂರು : ಸದಸ್ಯರು

ಮಾನ್ಯ ಕುಲಪತಿಗಳು ಕಾರ್ಯಸೂಚಿಯನ್ನು ಮಂಡಿಸಿ, ವಿಶ್ವವಿದ್ಯಾಲಯದ ಅಭಿವೃದ್ಧಿಗೆ ರಚನಾತ್ಮಕ ಸಹಕಾರ ನೀಡಬೇಕೆಂದು ಸಭ್ಯಾಧ್ಯಕ್ಷರ ವೇದಿಕೆಯಿಂದ ತಿಳಿಸಿದರು.

## *ಸಿಂಡಿಕೇಟ್ ಐಟಂ ಸಂಖ್ಯೆ: 01/91*

**ವಿಷಯ:-** ದಿನಾಂಕ: 04-06-2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

***ನಿರ್ಣಯ:-*** **ದೃಢೀಕರಿಸಲಾಯಿತು.**

## ಸಿಂಡಿಕೇಟ್ ಐಟಂ ಸಂಖ್ಯೆ: 02/90

**ವಿಷಯ:–** ದಿನಾಂಕ: 12–04–2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ

*ನಿರ್ಣಯ:–* **ಸಿಂಡಿಕೇಟ್ ಸದಸ್ಯರುಗಳೆಲ್ಲ ಒಪ್ಪಿಗೆ ನೀಡಿದರು.**

## ಸಿಂಡಿಕೇಟ್ ಐಟಂ ಸಂಖ್ಯೆ: 03/90

**ವಿಷಯ:–** ದಿನಾಂಕ: 23–05–2016 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ

*ನಿರ್ಣಯ:–* **ಸಿಂಡಿಕೇಟ್ ಸದಸ್ಯರುಗಳೆಲ್ಲ ಒಪ್ಪಿಗೆ ನೀಡಿದರು.**

**ದಿನಾಂಕ:04–06–2016ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮುಂದೂಡಿದ ವಿಷಯಗಳು**

## ಸಿಂಡಿಕೇಟ್ ಐಟಂ ಸಂಖ್ಯೆ: 04/91

**ವಿಷಯ:–** Logisys Company ಜೊತೆಗೆ ಮೂರು ವರ್ಷದ ಅವಧಿಗಾಗಿ ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು. ಇದರ ಅವಧಿಯು ಜೂನ್/ಜುಲೈ 2017ರಂದು ಮುಗಿಯಲಿದ್ದು ಈಗ ಇದನ್ನು ಕಡಿಮೆ ಮಾಡಿದಲ್ಲಿ ಕಾನೂನಾತ್ಮಕ ತೊಡಕುಗಳನ್ನು ಉಂಟಾಗಬಹುದೆಂದು ಧೀರ್ಘವಾಗಿ ಚರ್ಚಿಸಿದ ಮೇಲೆ ಒಡಂಬಡಿಕೆ ಹಾಗೂ ಸರಕಾರದ ಪತ್ರವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ತಿಳಿಸಿದುದರ ಪ್ರಯುಕ್ತ ಈ ವಿಷಯವನ್ನು ಮುಂದೂಡಲಾಯಿತು.

*ನಿರ್ಣಯ:–*

**ಈ ವಿಷಯ ಕುರಿತು ಐಟಂ ಸಂಖ್ಯೆ:14ರಲ್ಲಿ ಚರ್ಚಿಸಲು *ತೀರ್ಮಾನಿಸಲಾಯಿತು.***

## ಸಿಂಡಿಕೇಟ್ ಐಟಂ ಸಂಖ್ಯೆ :05/91

ವಿಷಯ:– ವಿಶ್ವವಿದ್ಯಾಲಯದ ವಿವಿಧ ಉಪ–ಸಮಿತಿಗಳನ್ನು ರಚಿಸುವ ಕುರಿತು

ಉಲ್ಲೇಖ:–1.ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 37ರ ಪ್ರಕಾರ

2.ಸರಕಾರದ ಪತ್ರ ಸಂಖ್ಯೆ:ಇಡಿ19ಎಂವಿಎಸ್2009 ದಿನಾಂಕ:1–4–2011

3.KSWUB/Const.BC/2014-15/184 date:02-05-2015

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆಗಾಗಿ ವಿವಿಧ ಉಪ–ಸಮಿತಿಗಳನ್ನು ಮಾನ್ಯ ಕುಲಪತಿಗಳ ನಿರ್ದೇಶನದ ಪ್ರಕಾರ (ಉಲ್ಲೇಖ:1,2,3) ಅಧಿಸೂಚನೆಯಂತೆ ರಚನೆ ಮಾಡಲಾಗಿತ್ತು. ಉಲ್ಲೇಖ:03ರ ಪ್ರಕಾರ ದಿನಾಂಕ:01–05–2016ರಂದು ಸದರಿ ಸಮಿತಿಗಳ ಅವಧಿಯು ಮುಗಿದಿರುತ್ತದೆ. ಆದಕಾರಣ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:–*

**ವಿವಿಧ ಉಪ–ಸಮಿತಿಗಳನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.**

## ಸಿಂಡಿಕೇಟ್ ಐಟಂ ಸಂಖ್ಯೆ :06/91

**ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ.ಆರ್.ಸಿ.ಪಾಟೀಲ ಇವರು ಈ ಕೆಳಕಂಡ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.**

**ವಿಷಯ: ಪಿಎಚ್.ಡಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವ ಕುರಿತು.**

ಈ ಮೇಲಿನ ವಿಷಯದನ್ವಯ ವಿಶ್ವವಿದ್ಯಾಲಯದ ಪ್ರತಿಯೊಂದು ವಿಭಾಗಗಳಲ್ಲಿ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಅಂಕಪಡೆದು ದಾಖಲಾತಿ ಪಡೆದ ವಿದ್ಯಾರ್ಥಿನಿಯರಿಗೆ ಶಿಷ್ಯವೇತನವನ್ನು ನೀಡಬೇಕು.

ಈಗಾಗಲೇ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಶಿಷ್ಯವೇತನವನ್ನು ನೀಡುತ್ತಿದ್ದು ಅದರ ಪ್ರತಿಗಳನ್ನು ಈ ಪತ್ರಕ್ಕೆ ಲಗತ್ತಿಸಲಾಗಿದೆ.

*ನಿರ್ಣಯ:-*

**ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ.ಆರ್.ಸಿ.ಪಾಟೀಲರವರ ಪ್ರಸ್ತಾವನೆಯನ್ನು ಗೌರವಿಸುತ್ತಾ, ವಿಶ್ವವಿದ್ಯಾನಿಲಯವು ಈಗಾಗಲೇ ಕೈಗೊಂಡ ಕ್ರಮವನ್ನು ವಿವರಿಸಲಾಯಿತು. ಪೂರ್ಣಾವಧಿ ಸಂಶೋಧನಾ ವಿದ್ಯಾರ್ಥಿಗಳಿಗೆ ಐದು ಗಂಟೆಗಳ ಬೋಧನಾವಧಿಯನ್ನು ನೀಡಿ, ಅವರಿಗೆ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಆದಾಗ್ಯೂ ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಈ ವಿಷಯವನ್ನು ಪರಿಗಣಿಸಲಾಗುವುದು ಎಂದು ತೀರ್ಮಾನಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ: 07/91*

2016-17 ನೇ ಸಾಲಿನಿಂದ ವಿಶ್ವವಿದ್ಯಾಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳ ಎಲ್ಲ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆಗಳ ರಚನಾ ಸದಸ್ಯರು, ಪ್ರಶ್ನೆಪತ್ರಿಕೆಗಳನ್ನು ತಯಾರಿಸಿ ಹಾರ್ಡ (ಎ ಮತ್ತು ಬಿ) ಕಾಪಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸುತ್ತಾ ಬಂದಿರುತ್ತಾರೆ. ಆದರೆ ಪ್ರಶ್ನೆಪತ್ರಿಕೆಗಳು ಪರೀಕ್ಷಾ ವಿಭಾಗಕ್ಕೆ ಬಂದ ತರುವಾಯ ನೇರವಾಗಿ ಮುದ್ರಣಕ್ಕೆ ಸಲ್ಲಿಸಲಾಗುತ್ತದೆ. ಬರವಣಿಗೆಯ ಲೋಪದೋಷಗಳು, ಅಂಕಗಳ ವ್ಯತ್ಯಾಸ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಗೊಂದಲಗಳು ಉಂಟಾದಾಗ ಅವುಗಳ ಕುರಿತು ಮುದ್ರಕರು ಕುಲಸಚಿವ(ಮೌಲ್ಯಮಾಪನ)ರನ್ನು ಸಂಪರ್ಕಿಸಿದಾಗ ಸ್ಪಷ್ಟತೆ ನೀಡಲು ಅವರಿಗೆ ಸಾಧ್ಯವಾಗುವದಿಲ್ಲ. ಏಕೆಂದರೆ ನಮ್ಮಲ್ಲಿ ಹಾರ್ಡಕಾಪಿ ಇರುವುದಿಲ್ಲ, ಹಾಗೂ ಇದು ಗೌಪ್ಯತೆಯ ವಿಚಾರ ಸಹ ಆಗಿರುವುದರಿಂದ ಇನ್ನು ಮುಂದೆ ಎಲ್ಲ ಪ್ರಶ್ನೆಪತ್ರಿಕೆಗಳ ರಚನಾ ಸದಸ್ಯರು ಹಾಗೂ ಬಿ.ಓ.ಇ ಚೇರ್‌ಮನ್ನರು ಮ್ಯಾನುಸ್ಕ್ರಿಪ್ಟ್ ಜೊತೆಗೆ ಸ್ಪಷ್ಟವಾಗಿ ಗಣಕಯಂತ್ರದಲ್ಲಿ ಟೈಪ್ ಮಾಡಿದ ಪ್ರಶ್ನೆಪತ್ರಿಕೆಗಳ ಸಾಫ್ಟಕಾಪಿ ಹಾಗೂ ಹಾರ್ಡಕಾಪಿಯನ್ನು ಕುಲಸಚಿವರು(ಮೌಲ್ಯಮಾಪನ) ಇವರಿಗೆ ಕಳುಹಿಸಲು ಸಿಂಡಿಕೇಟ್ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ:-*

**ಈ ಹಿಂದೆ ನಡೆದ ಕ್ರಮದಂತೆ ಮುಂದುವರೆಯಲು ಹಾಗೂ ಬಿ.ಓ.ಇ(BOE) ಅಧ್ಯಕ್ಷರಿಗೆ** *Manuscript* **ತಯಾರಿಸುವಾಗ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲು ತೀರ್ಮಾನಿಸಲಾಯಿತು. ಪದವಿ ಮಟ್ಟದ ಪ್ರಶ್ನೆಪತ್ರಿಕೆಗಳ ಪರಿವೀಕ್ಷಣೆ(ಸ್ಕ್ರುಟಿನಿ) ಮಾಡಲು ಈಗ ಒಂದೇ ದಿನ ಇದೆ. ಅದರ ಬದಲು ಪ್ರಶ್ನೆಪತ್ರಿಕೆಗಳ ಸಂಖ್ಯೆಯನ್ನು ಗಮನದಲ್ಲಿಟ್ಟು ಎರಡು ದಿನಗಳಿಗೆ ಬಿ.ಓ.ಇ ಸಭೆಯನ್ನು ವಿಸ್ತರಿಸುವುದು ಸೂಕ್ತ ಎಂಬ ನಿರ್ಧಾರಕ್ಕೆ ಬರಲಾಯಿತು. ಈ ವಿಷಯಕ್ಕೆ ಎಲ್ಲ ಸದಸ್ಯರು ಏಕಮತದಿಂದ ಒಪ್ಪಿಕೊಂಡರು.**

## *ಸಿಂಡಿಕೇಟ್ ಐಟಂ ಸಂಖ್ಯೆ:08/91*

ವಿಷಯ: ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ಎಲ್ಲ
ಆದೇಶಗಳಲ್ಲಿನ "ಚಿನ್ನಪ್ಪ ವರದಿಗೆ ಒಳಪಟ್ಟು" ಎಂಬ ಷರತ್ತನ್ನು ತೆಗೆಯುವ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ 2007ರಲ್ಲಿ ನೇಮಕಗೊಂಡ ಎಲ್ಲ ಬೋಧಕ ಸಿಬ್ಬಂದಿಗಳ ಆದೇಶಗಳಲ್ಲಿ ಹಾಗೂ ವಾರ್ಷಿಕ ಮುಂಬಡ್ತಿ ಇತ್ಯಾದಿಗಳಲ್ಲಿ 'ಚಿನ್ನಪ್ಪ ವರದಿಗೆ ಒಳಪಟ್ಟು' ಎಂಬ ಷರತ್ತನ್ನು ಹಾಕಲಾಗಿದೆ. ಈ ನೇಮಕಾತಿಗಳನ್ನು ಸರಕಾರ ಅನುಮೋದಿಸಿರುವುದರಿಂದ ಎಲ್ಲ ಬೋಧಕ ಸಿಬ್ಬಂದಿಗಳ ಆದೇಶಗಳಲ್ಲಿನ 'ಚಿನ್ನಪ್ಪ ವರದಿಗೆ ಒಳಪಟ್ಟು' ಎಂಬ ಷರತ್ತನ್ನು ಸಿಂಡಿಕೇಟ್‌ನಲ್ಲಿ ಅನುಮತಿ ಪಡೆದು ತೆಗೆದು

ಹಾಕಲು ಬೋಧಕ ಸಿಬ್ಬಂದಿ ದಿನಾಂಕ: 02-06-2016ರಂದು ಕುಲಸಚಿವರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಈ ಮನವಿಯನ್ನು ಸಿಂಡಿಕೇಟ್ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

*ನಿರ್ಣಯ:-*

**ಚಿನ್ನಪ್ಪ ವರದಿಯಲ್ಲಿ ಏನಿದೆ ಎಂಬುದೇ ಯಾರಿಗೂ ಗೊತ್ತಿಲ್ಲ. ಹೀಗಾಗಿ ಮೊದಲು ಅದನ್ನು ಪರಿಶೀಲಿಸುವುದು. ಆನಂತರದಲ್ಲಿ ಚಿನ್ನಪ್ಪ ವರದಿಗೆ ಒಳಪಟ್ಟು ಎಂಬ ಷರತ್ತನ್ನು ತೆಗೆಯುವುದು, ಸರಕಾರದ ಸೂಚನೆಯಂತೆ ಮುಂದುವರಿಯಲು ತೀರ್ಮಾನಿಸಲಾಯಿತು. ಇದಕ್ಕೆ ಎಲ್ಲ ಸದಸ್ಯರು ಒಪ್ಪಿಕೊಂಡರು.**

## *ಹೊಸ ವಿಷಯಗಳು*

### *ಸಿಂಡಿಕೇಟ್ ಐಟಂ ಸಂಖ್ಯೆ : 09/92 ದಿನಾಂಕ:16-7-2016*

ವಿಷಯ: ಕುಮಾರಿ ಶರಣೇಶ್ವರಿ ರೇಷ್ಮಿ ಮಹಿಳಾ ಶಿಕ್ಷಣ (ಬಿ.ಇಡಿ) ಕಾಲೇಜಿಗೆ 2016-17ನೇ ಸಾಲಿನಿಂದ ಪ್ರಾರಂಭಿಸಲು ಸರ್ಕಾರದಿಂದ ಅನುಮತಿ ಪತ್ರ ಬಗ್ಗೆ.

ಉಲ್ಲೇಖ:1. NCTE ಪತ್ರ ಸಂಖ್ಯೆ:SRO/NCTE/SRCAPP14076/B.Ed/KA/2015-16. ದಿನಾಂಕ:07-07-2015.

2. ಸರ್ಕಾರದ ಪತ್ರ ಸಂಖ್ಯೆ: ಇಡಿ 69 ಎಂವಿವಿ 2015. ದಿನಾಂಕ:16-07-2015.
3. ಸ್ಥಾನಿಕ ವಿಚಾರಣಾ ಸಮಿತಿ ವರದಿ ದಿನಾಂಕ:03-08-2015.
4. ಕಛೇರಿ ಪತ್ರ ಸಂಖ್ಯೆ:ಕರಾಮವಿವಿ/ಶೈಕ್ಷಣಿಕ/ಸಂ-1/2015-16/1619. ದಿ:26-08-2015.
5. ಸರ್ಕಾರದ ಪತ್ರ ಸಂಖ್ಯೆ: ಇಡಿ 20 ಎಂವಿವಿ 2015. ದಿನಾಂಕ:17-06-2016.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2016-17ನೇ ಶೈಕ್ಷಣಿಕ ಸಾಲಿಗೆ ಕುಮಾರಿ ಶರಣೇಶ್ವರಿ ರೇಷ್ಮಿ ಮಹಿಳಾ ಶಿಕ್ಷಣ (ಬಿ.ಇಡಿ) ಕಾಲೇಜಿಗೆ ಉಲ್ಲೇಖಿತ(2)ರ ಸರ್ಕಾರದ ನಿರ್ದೇಶನದಂತೆ 45 ದಿನ ಒಳಗಾಗಿ ಸ್ಥಾನಿಕ ವಿಚಾರಣಾ ಸಮಿತಿ ತಪಾಸಣೆ ಕಾರ್ಯ ಜರುಗಿಸಿ ಸರ್ಕಾರಕ್ಕೆ ಉಲ್ಲೇಖಿತ(4)ರ ಪತ್ರದ ಮೂಲಕ ವರದಿಯನ್ನು ಸಲ್ಲಿಸಲಾಗಿತ್ತು. ಈಗ ಸರ್ಕಾರದಿಂದ ಉಲ್ಲೇಖಿತ(5)ರ ಅನುಮತಿ ಪತ್ರ ಬಂದಿರುತ್ತದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತರಲಾಗಿದೆ.

*ನಿರ್ಣಯ:-* **ಅನುಮೋದಿಸಲಾಯಿತು**

### *ಸಿಂಡಿಕೇಟ್ ಐಟಂ ಸಂಖ್ಯೆ :10/92 ದಿನಾಂಕ:16-7-2016*

ವಿಷಯ: ಸಂಶೋಧನಾ ಕೇಂದ್ರಗಳ ಮಾನ್ಯತೆ ಹಾಗೂ ಮುಂದುವರಿಕೆ ಕುರಿತು.

ಉಲ್ಲೇಖ:1. KSWU/ACA/Research Centre/2015/16/334 ದಿನಾಂಕ:29-01-2016

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಸಂಶೋಧನಾ ಕೇಂದ್ರಗಳ ಪ್ರಾರಂಭ ಹಾಗೂ ಮುಂದುವರಿಕೆ ಕುರಿತು ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ಶ್ರೀಮತಿ ವೀರಮ್ಮ ಗಂಗಸಿರಿ ಪದವಿ ಮಹಿಳಾ ಮಹಾವಿದ್ಯಾಲಯ, ಕಲಬುರಗಿ ಮತ್ತು ಎಸ್.ಜೆ.ಎಮ್.ವ್ಹಿ.ಎಸ್. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಹುಬ್ಬಳ್ಳಿ, ಈ ಎರಡು ಮಹಾವಿದ್ಯಾಲಯಗಳಿಂದ ಸಂಶೋಧನಾ ಕೇಂದ್ರದ ಮುಂದುವರಿಕೆ ಅರ್ಜಿಗಳು ಬಂದಿದ್ದು, ಬೀ.ಬೀ.ರಜಾ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ಕಲಬುರ್ಗಿ ಇವರಿಂದ ಹೊಸ ಸಂಶೋಧನಾ ಕೇಂದ್ರದ ಮಾನ್ಯತೆಗೆ ಅರ್ಜಿ ಬಂದಿರುತ್ತದೆ. ಆದ್ದರಿಂದ ಸಂಶೋಧನಾ ಕೇಂದ್ರದ ತಪಾಸಣೆ ಮಾಡಲು ತಜ್ಞರ ಸಮಿತಿ ರಚಿಸಬೇಕಾಗಿದೆ. ಕಾರಣ ಈ ವಿಷಯ ಕರ್ನಾಟಕ ರಾಜ್ಯ ಅಧಿನಿಯಮ 2000 ಪ್ರಕರಣ 4(viii)ರ ಪ್ರಕಾರ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

*ನಿರ್ಣಯ:-* **ಸಂಶೋಧನಾ ಕೇಂದ್ರಗಳ ಮಾನ್ಯತೆ ಮತ್ತು ಮುಂದುವರಿಕೆಗೆ ನಿಯಮಾನುಸಾರ ತಜ್ಞರ ಸಮಿತಿಯನ್ನು ರಚಿಸಲು ಸಭೆಯು ಒಪ್ಪಿಗೆ ನೀಡಿತು.(ಇಬ್ಬರು ವಿಷಯ ತಜ್ಞರು, ಒಬ್ಬರು ಡೀನ್ ಮತ್ತು ಮಾನ್ಯ ಕುಲಪತಿಯವರಿಂದ ನಾಮನಿರ್ದೇಶನಗೊಂಡ ಓರ್ವ ಸದಸ್ಯರು ಸಮಿತಿಯಲ್ಲಿ ಇರುತ್ತಾರೆ).**

## *ಸಿಂಡಿಕೇಟ್ ಐಟಂ ಸಂಖ್ಯೆ:11/92* *ದಿನಾಂಕ:16-7-2016*

**ವಿಷಯ:**2016-17 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ/ಸ್ನಾತಕೋತ್ತರ ಡಿಪ್ಲೊಮಾ. ಬಿ.ಪಿ.ಎಡ್, ಸರ್ಟಿಫಿಕೇಟ್ ಕೋರ್ಸು, ಬಾಹ್ಯಮೂಲ ಸ್ಕೀಮ್, ವಲಸೆ ಪ್ರಮಾಣ ಪತ್ರ ಮತ್ತು ವರ್ಗಾವಣೆ ಪ್ರಮಾಣ ಪತ್ರಗಳ ಶುಲ್ಕಗಳ ಕುರಿತು

ಪ್ರತಿ ವರ್ಷದಂತೆ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ 2016-17ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ/ಸ್ನಾತಕೋತ್ತರ ಡಿಪ್ಲೊಮಾ. ಬಿ.ಪಿ.ಎಡ್, ಸರ್ಟಿಫಿಕೇಟ್ ಕೋರ್ಸು, ಬಾಹ್ಯಮೂಲ ಸ್ಕೀಮ್, ವಲಸೆ ಪ್ರಮಾಣ ಪತ್ರ ಮತ್ತು ವರ್ಗಾವಣೆ ಪ್ರಮಾಣ ಪತ್ರಗಳ ಶುಲ್ಕ ಶೇ10%ರಷ್ಟು ಹೆಚ್ಚಿಸಿದ್ದನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಮಂಡಿಸಿದೆ.

*ನಿರ್ಣಯ:-* **ಅನುಮೋದಿಸಲಾಯಿತು**

## *ಸಿಂಡಿಕೇಟ್ ಐಟಂ ಸಂಖ್ಯೆ :12/92* *ದಿನಾಂಕ:16-7-2016*

ವಿಷಯ: ಎಮ್.ಎ.ಇಂಗ್ಲೀಷ್ ವಿಷಯಕ್ಕೆ ಇಟ್ಟ ಠೇವಣಿ ಹಣ ಮರಳಿಸುವ ಕುರಿತು

ಉಲ್ಲೇಖ:1.ಸಿಂಡಿಕೇಟ್ ಟೇಬಲ್ ಅಜೆಂಡಾ ಸಂಖ್ಯೆ:03 ದಿನಾಂಕ:02-01-2016
2.ನಮ್ಮ ಪತ್ರ ಸಂಖ್ಯೆ:ಕರಾಮವಿವಿ/ಶೈಕ್ಷಣಿಕ/2015-16/3032 ದಿ:19-2-2016
3.ಕಾಲೇಜಿನ ಪತ್ರ ಸಂಖ್ಯೆ:ಮಮಧಾ:15-16:904 ದಿನಾಂಕ:12-3-2016

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರ 1ರನ್ವಯ ಭದ್ರತಾ ಠೇವಣಿ ಮೊತ್ತವನ್ನು ಶ್ರೀ ಹರಿಕಲ್ಲಿ ಅಜ್ಜರವರ ಹೆಸರು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ ಶಾಶ್ವತವಾಗಿರಲು ಅವರ ಹೆಸರಿನಲ್ಲಿ ಪ್ರತಿಭಾವಂತ ಬಡ ವಿದ್ಯಾರ್ಥಿನಿಯರಿಗೆ ಶಿಷ್ಯವೇತನಕ್ಕಾಗಿ ಉಪಯೋಗಿಸಲು ತೀರ್ಮಾನಿಸಿದಂತೆ ಉಲ್ಲೇಖಿತ(3)ರನ್ವಯ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಆಡಳಿತ ಮಂಡಳಿಯವರು ಒಪ್ಪಿರುವುದಿಲ್ಲ. ಆದ್ದರಿಂದ ಸದರಿ ಠೇವಣಿ ಹಣವನ್ನು ಮರಳಿಕಳಿಸಬೇಕಾಗಿ ಕೋರಿರುತ್ತಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಸೂಕ್ತ ಕ್ರಮಕ್ಕಾಗಿ ಮಂಡಿಸಿದೆ.

*ನಿರ್ಣಯ:-* **ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲು ಸರ್ವಾನುಮತದಿಂದ ಒಪ್ಪಿಕೊಳ್ಳಲಾಯಿತು. ಸದರಿ ಮಹಾವಿದ್ಯಾಲಯದವರು ದಿನಾಂಕ:02-01-2016ರಂದು ಜರುಗಿದ ಸಿಂಡಿಕೇಟ್ ನಿರ್ಣಯವನ್ನು ಗೌರವಿಸದೆ ಇರುವ ಕಾರಣ ಇನ್ನು ಮುಂದೆ ಈ ವಿಷಯ ಕುರಿತು ಮಹಾವಿದ್ಯಾಲಯದ ಜೊತೆಗೆ ಯಾವುದೆ ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲವೆಂದು ತಿಳಿಸಲು ಸೂಚಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ :13/92* *ದಿನಾಂಕ:16-7-2016*

ವಿಷಯ: ಪ್ರಾಚಾರ್ಯರ ಹುದ್ದೆಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ: ಅಧ್ಯಕ್ಷರ ಪತ್ರ ದಿನಾಂಕ:11-5-2016

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅಧ್ಯಕ್ಷರು ಬಸವೇಶ್ವರ ಎಜ್ಯುಕೇಶನ್ ಸೊಸೈಟಿ(ರಿ) ಅಕ್ಕಮಹಾದೇವಿ ಮಹಿಳಾ ಪದವಿ ಮಹಾವಿದ್ಯಾಲಯ, ಬೈಲಹೊಂಗಲ್‌ದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಚಾರ್ಯರ ಹುದ್ದೆಗೆ ವಿಶ್ವವಿದ್ಯಾಲಯದ ಅನುದಾನ ರಹಿತ ಅನುಮೋದನೆಗೆ ವಿನಂತಿಸಿರುತ್ತಾರೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 59ನೇ ಕಲಂನ 3(ಸಿ)ಪ್ರಕಾರ ಪ್ರಾಚಾರ್ಯರ ಹುದ್ದೆಯ ಅರ್ಹತೆ ಮತ್ತು ಅವರ ಪದಾವಧಿಯನ್ನು ನಿಯಂತ್ರಿಸುವ ಷರತ್ತುಗಳನ್ವಯ ಎಲ್ಲಮೂಲ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಸೂಕ್ತ ಕ್ರಮಕ್ಕಾಗಿ ಮಂಡಿಸಿದೆ.

*ನಿರ್ಣಯ:-* **ಡಾ.ಸಿ.ಬಿ.ಗಣಾಚಾರಿ, ಅಕ್ಕಮಹಾದೇವಿ ಮಹಿಳಾ ಪದವಿ ಕಾಲೇಜು, ಬೈಲಹೊಂಗಲ ಇವರನ್ನು ಅನುದಾನರಹಿತವಾಗಿ ಪ್ರಾಚಾರ್ಯರ ಹುದ್ದೆಗೆ ಅನುಮೋದಿಸಲಾಯಿತು. ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ**

**ಆರ್.ಸಿ.ಪಾಟೀಲ, ಶ್ರೀ ಸತ್ಯಾನಂದ ಪಾತ್ರೋಟ, ಶ್ರೀ ಆರ್.ಬಿ.ಭಾವಿಕಟ್ಟಿ ಮತ್ತು ಡಾ.ಶ್ರೀನಿವಾಸ ಬಳ್ಳಿ ಇವರು ಸಂಯೋಜಿತ ಮಹಿಳಾ ಮಹಾವಿದ್ಯಾಲಯದಲ್ಲಿನ ಪ್ರಾಂಶುಪಾಲರ ಪಟ್ಟಿ ಮಾಡಿ, ಅದರಲ್ಲಿ ಪ್ರಾಚಾರ್ಯರ ಹುದ್ದೆಗೆ ಅರ್ಹರಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಅನುಮೋದಿಸಲು ಸೂಚಿಸಿದರು. ಮುಂದುವರೆದು ಸದರಿಯವರನ್ನು ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗೆ ಸದಸ್ಯರಾಗಿ ನಾಮನಿರ್ದೇಶನ ಮಾಡಲು ಇದರಿಂದ ಅನುಕೂಲವಾಗುತ್ತದೆ ಎಂದು ತಿಳಿಸಿದರು. ಈ ವಿಷಯ ಆದಷ್ಟು ತುರ್ತಾಗಿ ಕಾರ್ಯರೂಪದಲ್ಲಿ ಬರಬೇಕು ಎಂದು ಹೇಳಿದರು.**

## *ಸಿಂಡಿಕೇಟ್ ಐಟಂ ಸಂಖ್ಯೆ :14/92 ದಿನಾಂಕ:16-7-2016 ಹಾಗೂ 04/91 ದಿನಾಂಕ:12-4-2016*

ಸರ್ಕಾರದ ಪತ್ರ ಸಂಖ್ಯೆ: ಇಡಿ 03 EGH 01, ಬೆಂಗಳೂರು, ದಿನಾಂಕ: 04-07-2015 ಆದೇಶ ಪತ್ರದನ್ವಯ ಸಾಫ್ಟ್‌ವೇರ್ಸ ಖರೀದಿಸಲು ಅಥವಾ ನಿರ್ವಹಣೆ ಬಗ್ಗೆ ಯಾವುದೇ ಏಜನ್ಸಿಯಿಂದ ಒಡಂಬಡಿಕೆ ಮಾಡಿಕೊಳ್ಳಬಾರದೆಂದು ವಿಶ್ವವಿದ್ಯಾಲಯಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಹಾಗೂ ಒಂದು ವೇಳೆ ಒಡಂಬಡಿಕೆ ಮಾಡಿಕೊಂಡಿದ್ದಲ್ಲಿ ಅವಧಿ ಮುಗಿದ ತಕ್ಷಣ ಮುಂದುವರೆಸದೆ ಇರಲು ಸ್ಪಷ್ಟ ನಿರ್ದೇಶನ ನೀಡಿರುತ್ತಾರೆ.

ದಿ-18-12-2014 ರಂದು ಜರುಗಿದ ಸಿಂಡಿಕೇಟ್ ಸಭೆಯ ಐಟಂ ನಂ 6 ರಲ್ಲಿ ಲಾಜಿಸ್ಟಕ್ಸ ಬೆಂಗಳೂರು ಇವರೊಂದಿಗೆ ಗಣಕೀಕರಣ ಕಾರ್ಯಕ್ಕಾಗಿ 2 ವರ್ಷಗಳಿಗೆ ಮಾತ್ರ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿ ಪಡೆಯಲಾಗಿದೆ. ಆದರೆ ದಿ-20-02-2015 ರಂದು ನಮೂದಿತ ಕಂಪನಿಯೊಂದಿಗೆ 3 ವರ್ಷಗಳಿಗಾಗಿ ಅಂದರೆ ನವೆಂಬರ-ಡಿಸೆಂಬರ 2014 ರಿಂದ ಮೇ/ಜೂನ 2017 ರ ವರೆಗೆ ಎಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ವಿಷಯವನ್ನು ಇಂದಿನ ಸಿಂಡಿಕೇಟ್ ಸದಸ್ಯರು ಶ್ರೀ ರವೀಂದ್ರ ಬಿ ಭಾವಿಕಟ್ಟಿಯವರು 17-3-2016 ರಂದು ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಿದ್ದರಿಂದ ಸರ್ಕಾರದ ಪತ್ರ ಸಂಖ್ಯೆ: : ಇಡಿ 19 ಎಂವಿವಿ 2016 ದಿ-17-06-2016 ರ ಪತ್ರದನ್ವಯ ದಿ-3-3-2016 ರಂದು ಜರುಗಿದ 89 ನೇ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಐಟಂ ನಂ 19 ರಲ್ಲಿ ಕೈಗೊಂಡ ನಿರ್ಣಯವನ್ನು ಏಕೆ ರದ್ದುಗೊಳಿಸಬಾರದೆಂಬುದಕ್ಕೆ ಸೂಕ್ತ ಸಮಜಾಯಿಷಿ/ವಿವರಣೆ ನೀಡಲು ವಿಶ್ವವಿದ್ಯಾಲಯವು ನೋಟಿಸ್ ಮುಟ್ಟಿದ 15 ದಿನಗಳ ಒಳಗಾಗಿ ಸಲ್ಲಿಸಲು ಸೂಚಿಸಿರುತ್ತಾರೆ. ಈ ವಿಷಯ ಸಭೆಯ ಅವಗಾಹನೆಗಾಗಿ ಹಾಗೂ ಚರ್ಚೆಗಾಗಿ ಮಂಡಿಸಲಾಗಿದೆ.

<u>ನಿರ್ಣಯ:-</u>

**ಮೇಲಿನ ಐಟಂ ಕುರಿತು ದೀರ್ಘವಾಗಿ ಚರ್ಚಿಸಲಾಯಿತು. ಲಾಜಿಸಿಸ್ ಕಂಪೆನಿಯಿಂದ ವಿಶ್ವವಿದ್ಯಾನಿಲಯಕ್ಕೆ ಆಗುತ್ತಿರುವ ಆರ್ಥಿಕ ಹೊರೆಯನ್ನು ವಿವರಿಸಲಾಯಿತು. ಶ್ರೀ.ರವೀಂದ್ರ ಭಾವಿಕಟ್ಟಿ ಅವರು ಕಂಪನಿ ಜೊತೆಗಿನ ಒಪ್ಪಂದವನ್ನು ಮುರಿದುಕೊಳ್ಳುವುದರಿಂದ ಕಾನೂನಿನ ತೊಡಕು ಆಗಬಹುದು ಎಂದು ಅಭಿಪ್ರಾಯಪಟ್ಟರು. ಶ್ರೀ.ಎಂ.ಎಲ್.ಶಾಂತಗಿರಿ ಅವರು ವಿಶ್ವವಿದ್ಯಾಲಯವು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬಲ್ಲುದೇ ಎಂಬ ಪ್ರಶ್ನೆಯನ್ನು ಕೇಳಿದರು. ಡಾ.ಶ್ರೀನಿವಾಸ ಬಳ್ಳಿ ಅವರು ತಮ್ಮ ಕಾಲೇಜಿನ ನಿದರ್ಶನವನ್ನು(ಉದಾಹರಣೆ) ನೀಡಿ, ಸ್ವತಂತ್ರವಾದ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಿಕೊಳ್ಳುವುದು ಸೂಕ್ತ ಎಂದರು. ಸರಕಾರದಿಂದ ಬಂದ ಪತ್ರವನ್ನು ಸಭೆಗೆ ತಿಳಿಸಿ, 15ದಿನಗಳ ಒಳಗಾಗಿ ಉತ್ತರಿಸಬೇಕಿರುವುದನ್ನು ತಿಳಿಸಲಾಯಿತು. ಅಂತಿಮವಾಗಿ ದಿನಾಂಕ:18-12-2014ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಲಾಜಿಸಿಸ್ ಕಂಪೆನಿ ಬೆಂಗಳೂರು ಇವರಿಂದ ಮಾಡಿಕೊಂಡಿರುವ ಒಪ್ಪಂದವನ್ನು ಡಿಸೆಂಬರ್ 2016ರವರೆಗೆ ಮಾತ್ರ ಮುಂದುವರಿಸಲು ಸರ್ವಾನುಮತದಿಂದ ಒಪ್ಪಿಕೊಳ್ಳಲಾಯಿತು. ಇಡಿ 19 ಎಂವಿವಿ 2016 ದಿನಾಂಕ:17-06-2016 ರ ಪತ್ರದನ್ವಯ ದಿನಾಂಕ:03-03-2016 ರಂದು ಜರುಗಿದ 89 ನೇ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಐಟಂ ನಂ 19 ರಲ್ಲಿ ಕೈಗೊಂಡ ನಿರ್ಣಯವನ್ನು ರದ್ದುಗೊಳಿಸಬಹುದೆಂದು ಸಭೆಯು ಅಭಿಪ್ರಾಯಕ್ಕೆ ಬಂದು, ಅದರಂತೆ ಸರಕಾರಕ್ಕೆ ಉತ್ತರಿಸಲು ತೀರ್ಮಾನಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ :15/92 ದಿನಾಂಕ:16-7-2016*

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ 2015-16 ನೇ ಸಾಲಿನ ದ್ವಿತೀಯ ಮತ್ತು ಚತುರ್ಥ ಸ್ನಾತಕ ಮತ್ತು ಸ್ನಾತಕೋತ್ತರ ಡಿಪ್ಲೊಮಾ ಸರ್ಟಿಫಿಕೇಟ್ ಕೋರ್ಸುಗಳ ಪರೀಕ್ಷೆಯನ್ನು ದಿ-06-06-2016 ರಿಂದ

28-06-2016 ರವರೆಗೆ ಸುತ್ತೋಲೆ ಹೊರಡಿಸಿ ಆಯಾ ಕಾಲೇಜುಗಳಿಗೆ/ವಿಭಾಗಗಳಿಗೆ ಕಳುಹಿಸಿ ಕೊಡಲಾಗಿರುತ್ತದೆ. ದಿ-13-06-2016 ದಿನದಂದು ನಡೆಯುವ ಸಮಾಜ ಕಾರ್ಯ ವಿಭಾಗದ Social Work Administration and Social Action ಪರೀಕ್ಷೆಯನ್ನು ಪೋಲಿಸ್ ಇಲಾಖೆಯ ದೈಹಿಕ ಪರೀಕ್ಷೆ ಇದ್ದುದರಿಂದ ವಿಭಾಗದ ಸಂಯೋಜಕರ ಮತ್ತು ವಿದ್ಯಾರ್ಥಿನಿಯರ ವಿನಂತಿಯ ಮೇರೆಗೆ ಸದರಿ ವಿಷಯದ ಪರೀಕ್ಷೆಯನ್ನು ಮುಂದೂಡಿ ದಿ-17-06-2016 ರಂದು ನಡೆಸುವಂತೆ ಮತ್ತು ಪರಿಷ್ಕೃತ ವೇಳಾ ಪಟ್ಟಿಯನ್ನು ದಿ-28-05-2016 ರಂದು ವಿ ಆರ್ ಎಲ್ ಮುಖಾಂತರ ಕಳುಹಿಸಲಾಗಿರುತ್ತದೆ. ಹಾಗೂ ದೂರವಾಣಿ ಮುಖಾಂತರವೂ ತಿಳಿಸಲಾಗಿದೆ ಮತ್ತು ವಿಶ್ವವಿದ್ಯಾಲಯದ ವೆಬ್ ಸೈಟ್‌ನಲ್ಲಿಯೂ ಸಹ ವೇಳಾಪಟ್ಟಿ ನೀಡಿರುತ್ತದೆ.

ಆದರೆ ಪ್ರಾಂಶುಪಾಲರು, ಸರದಾರ ವೀರನಗೌಡ ಪಾಟೀಲ, ಮಹಿಳಾ ವಿದ್ಯಾಪೀಠ ಹುಬ್ಬಳ್ಳಿ ಇವರು ಮೇಲ್ಕಂಡ ಪರೀಕ್ಷೆಯನ್ನು ಮೂಂದೂಡಲಾದ ವಿಷಯವನ್ನು ಗಣನೆಗೆ ತೆಗೆದುಕೊಳ್ಳದೆ ದಿನಾಂಕ: 17-06-2016 ರಲ್ಲಿ ಜರುಗಿಸಬೇಕಾದ Social work Administration and Social Action ವಿಷಯದ ಪ್ರಶ್ನೆಪತ್ರಿಕೆಯನ್ನು ಮುಂಚಿತವಾಗಿ ಲಕೋಟೆ ಒಡೆದು ದಿನಾಂಕ:13-06-2016 ರಂದು ಪರೀಕ್ಷೆ ನಡೆಸಿರುವುದು ಕಂಡುಬಂದಿದೆ. ತಕ್ಷಣ ಮಾನ್ಯ ಕುಲಸಚಿವರು(ಮೌಲ್ಯಮಾಪನ) ಇವರ ಗಮನಕ್ಕೆ ದಿನಾಂಕ: 15-06-2016 ರಂದು ಮಾನ್ಯ ಕುಲಪತಿಗಳ ಅನುಮತಿಯ ಮೇರೆಗೆ ಪುನಃ ಪ್ರಶ್ನೆಪತ್ರಿಕೆ ತಯಾರಿಸಿ ಮರು ಪರೀಕ್ಷೆಯನ್ನು ಪರಿಷ್ಕೃತ ವೇಳಾಪಟ್ಟಿ ಅನುಸಾರ ದಿನಾಂಕ: 17-06-2016 ರಂದು ನಡೆಸಲಾಯಿತು.

ಸದರಿ ಪ್ರಾಂಶುಪಾಲರಿಗೆ ಈ ವಿಷಯದ ಕುರಿತು ವಿವರಣೆ ಕೇಳಲಾಗಿತ್ತು. ಈ ನೋಟೀಸಿಗೆ ದಿನಾಂಕ: 15-06-2016 ರಂದು ಕಾಲೇಜಿನ ಪ್ರಾಂಶುಪಾಲರು ತಮ್ಮ ವಿವರಣೆಯನ್ನು ಸಲ್ಲಿಸಿರುತ್ತಾರೆ. ಪರೀಕ್ಷಾ ವಿಭಾಗದಿಂದ ನೀಡಲಾದ ನೋಟೀಸ್ ಹಾಗೂ ಸಂಬಂಧಿಸಿದ ಪ್ರಾಂಶುಪಾಲರಿಂದ ಬಂದ ವಿವರಣೆ ಪತ್ರವನ್ನು ಲಗತ್ತಿಸಲಾಗಿದ್ದು, ಈ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಮುಂದಿನ ಕ್ರಮಕ್ಕಾಗಿ ಸಾದರಪಡಿಸಿದೆ.

***ನಿರ್ಣಯ:-***

**ಸರದಾರ ವೀರನಗೌಡ ಪಾಟೀಲ, ಮಹಿಳಾ ವಿದ್ಯಾಪೀಠ ಹುಬ್ಬಳ್ಳಿ, ಪ್ರಾಂಶುಪಾಲರಿಗೆ ಇನ್ನು ಮುಂದೆ ಇಂಥ ತಪ್ಪುಗಳನ್ನು ಮಾಡದೆ ಸರಿಯಾದ ರೀತಿ, ಶಿಸ್ತುಬದ್ಧವಾಗಿ ಪರೀಕ್ಷೆ ನಡೆಸಲು ಸೂಚಿಸಬೇಕೆಂದು ತಿಳಿಸಲಾಯಿತು. ಮಾನ್ಯ ಸದಸ್ಯರುಗಳು ಮರು ಪರೀಕ್ಷೆ ಮಾಡಿದ ಖರ್ಚು ವೆಚ್ಚವನ್ನು ಸದರಿ ಮಹಾವಿದ್ಯಾಲಯದ ಪ್ರಾಂಶುಪಾಲರು ಭರಿಸಬೇಕೆಂದು ಒತ್ತಾಯಿಸಿದರು. ಮುಂದುವರೆದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 74(2)ರನ್ವಯ 2000/-(ಎರಡು ಸಾವಿರ)ಜುಲ್ಮಾನೆಯನ್ನು ವಿಧಿಸಬಹುದಾಗಿದೆ ಎಂದು ಕುಲಸಚಿವರು(ಪರೀಕ್ಷಾಂಗ) ಇವರು ಸೂಚಿಸಿದರು. ಸಭೆಯು ಈ ನಿರ್ಣಯವನ್ನು ಒಪ್ಪಿ ಒಂದು ತಿಂಗಳ ಒಳಗಾಗಿ ಸದರಿ ಕಾಲೇಜಿನವರಿಗೆ ಮೊತ್ತವನ್ನು ವಿಶ್ವವಿದ್ಯಾಲಯದ ಖಾತೆಗೆ ಭರಿಸಲು, ಸೂಚಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 16/92 ದಿನಾಂಕ:16-7-2016*

ವಿಶ್ವವಿದ್ಯಾಲಯದ 2015-16 ನೇ ಸಾಲಿನ ಸ್ನಾತಕ ಪರೀಕ್ಷೆಯನ್ನು ದಿನಾಂಕ: 25-05-2016ರಿಂದ 29-06-2016ರವರೆಗೆ ಜರುಗಿಸಲು ಆಯಾ ಕಾಲೇಜುಗಳಿಗೆ ಪರೀಕ್ಷಾ ವೇಳಾಪಟ್ಟಿಯನ್ನು ಮುಂಚಿತವಾಗಿ ಕಳುಹಿಸಲಾಗಿತ್ತು. ಆದರೆ ದಿನಾಂಕ: 09-06-2016 ರಂದು ಪದವೀಧರ ಹಾಗೂ ಶಿಕ್ಷಕರ ಮತಕ್ಷೇತ್ರಗಳ ಚುನಾವಣೆ ಇರುವ ಪ್ರಯುಕ್ತ ಸದರ ದಿನಗಳಂದು ಬಿ.ಎ 5 ನೇ ಸೆಮಿಸ್ಟರ್‌ನ ಸಮಾಜಶಾಸ್ತ್ರ ಹಾಗೂ ಗ್ರಾಮೀಣ ಅಭಿವೃದ್ಧಿ ವಿಷಯದ ಪರೀಕ್ಷೆಗಳನ್ನು ದಿನಾಂಕ: 30-06-2016 ರಂದು ಜರುಗಿಸಲು ಪರಿಷ್ಕೃತ ವೇಳಾಪಟ್ಟಿ ದಿನಾಂಕ: 06-06-2016 ರಂದು ಹೊರಡಿಸಲಾಗಿತ್ತು. ಈ ಮಾಹಿತಿಯನ್ನು ದೂರವಾಣಿಯ ಮುಖಾಂತರವೂ ಮತ್ತು ದಿನಪತ್ರಿಕೆಗಳಲ್ಲಿಯೂ ಮುಂಚಿತವಾಗಿ ತಿಳಿಸಲಾಗಿತ್ತು. ಇದನ್ನು ಗಣನೆಗೆ ತೆಗೆದುಕೊಳ್ಳದೇ ಪ್ರಾಂಶುಪಾಲರು ಶ್ರೀಮತಿ.ಗುಂಡಮ್ಮ ಬಸಪ್ಪ ಮಹಿಳಾ ಪದವಿ ಕಲಾ ಮಹಾವಿದ್ಯಾಲಯ, ಯಲಬುರ್ಗಾ ಇವರು ಪರಿಷ್ಕೃತ ವೇಳಾಪಟ್ಟಿಯಂತೆ ನಡೆಯಿಸದೇ ದಿನಾಂಕ: 09-06-2016 ರಂದು ಚುನಾವಣೆ ಇರುವ ದಿನ ಪರೀಕ್ಷೆ ನಡೆಯಿಸಿ ಕರ್ತವ್ಯ ಲೋಪವೆಸಗಿರುತ್ತಾರೆ. ಆದಕಾರಣ ಸದರಿ ಪ್ರಾಂಶುಪಾಲರಿಗೆ ದಿನಾಂಕ:22-06-2016 ರಂದು ವಿವರಣೆ ನೀಡುವಂತೆ ನೋಟೀಸ್‌ಜಾರಿ ಮಾಡಲಾಗಿದೆ.

ಪರೀಕ್ಷಾ ವಿಭಾಗದಿಂದ ನೀಡಲಾದ ನೋಟಿಸ್ ಹಾಗೂ ಸಂಬಂಧಿಸಿದ ಪ್ರಾಂಶುಪಾಲರಿಂದ ಬಂದ ವಿವರಣೆ ಪತ್ರವನ್ನು ಲಗತ್ತಿಸಲಾಗಿದ್ದು, ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಮುಂದಿನ ಕ್ರಮಕ್ಕಾಗಿ ಸಾದರಪಡಿಸಲಾಗಿದೆ.

*ನಿರ್ಣಯ:-*

**ಐಟಂ ಸಂಖ್ಯೆ:15ರಲ್ಲಿ ನಿರ್ಣಯ ಕೈಗೊಂಡಂತೆ ಈ ಸಂದರ್ಭದಲ್ಲಿಯೂ ಶ್ರೀಮತಿ.ಗುಂಡಮ್ಮ ಬಸಪ್ಪ ಮಹಿಳಾ ಪದವಿ ಕಲಾ ಮಹಾವಿದ್ಯಾಲಯ, ಯಲಬುರ್ಗಾದ ಪ್ರಾಂಶುಪಾಲರಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000 ಪ್ರಕರಣ 74(2)ರನ್ವಯ ರೂ.2000/-(ಎರಡು ಸಾವಿರ)ಜುಲ್ಮಾನೆಯನ್ನು ಒಂದು ತಿಂಗಳ ಒಳಗಾಗಿ ವಿಶ್ವವಿದ್ಯಾಲಯದ ಖಾತೆಗೆ ಭರಿಸಲು, ಸೂಚಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ :17/92* *ದಿನಾಂಕ:16-7-2016*

ವಿಷಯ:ಶ್ರೀ ಅಮರದೀಪ ಬಿದರಿ, ತಾಂತ್ರಿಕ ಸಹಾಯಕರು ಹಾಗೂ ಶ್ರೀ.ಮೆಹಬೂಬ.ಎಸ್.ಪಡೇಲ, ಕಿರಿಯ ತಾಂತ್ರಿಕ ಸಹಾಯಕರು, ಐ.ಸಿ.ಟಿ ವಿಭಾಗ ಇವರ ವೇತನ ಹೆಚ್ಚಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಅಮರದೀಪ ಬಿದರಿ, ತಾಂತ್ರಿಕ ಸಹಾಯಕರು ಹಾಗೂ ಶ್ರೀ.ಮಹಬೂಬ.ಎಸ್.ಪಟೇಲ ಕಿರಿಯ ತಾಂತ್ರಿಕ ಸಹಾಯಕರು, ಐ.ಸಿ.ಟಿ ವಿಭಾಗ ಇವರು ವೇತನ ಹೆಚ್ಚಿಸಲು ಕೋರಿ ಪತ್ರ ಸಲ್ಲಿಸಿದ್ದು ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-*

**ತಾತ್ವಿಕವಾಗಿ ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಇರುವಂತೆ, ಇವರಿಗೂ ವೇತನ ಹೆಚ್ಚಿಸಲು ಮಾನ್ಯ ಸದಸ್ಯರು ಒಪ್ಪಿದರು. ಆದರೆ ಶ್ರೀ ಅಮರದೀಪ ಬಿದರಿ ಮತ್ತು ಶ್ರೀ ಮೆಹಬೂಬ.ಎಸ್.ಪಟೇಲ ಇವರ ಶೈಕ್ಷಣಿಕ ಅರ್ಹತೆ ಮತ್ತು ಕೆಲಸದ ಸ್ವರೂಪಕ್ಕೆ ಸಂಬಂಧಿಸಿದಂತೆ ಮಾಹಿತಿ ಒದಗಿಸಲು ಸದಸ್ಯರು ಕೋರಿದರು. ಹೀಗಾಗಿ ಅಜೆಂಡಾವನ್ನು ಮುಂದೂಡಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ :18/92* *ದಿನಾಂಕ:16-7-2016*

ವಿಷಯ: ದಿನಾಂಕ:03-10-2015ರಂದು ಜರುಗಿದ ಡೀನ್ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಕುರಿತು

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:03-10-2015ರಂದು ಜರುಗಿದ ಡೀನ್ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-* *ಸದಸ್ಯರು ಒಮ್ಮತದಿಂದ ಅನುಮೋದಿಸಿದರು.*

## *ಸಿಂಡಿಕೇಟ್ ಐಟಂ ಸಂಖ್ಯೆ :19/92* *ದಿನಾಂಕ:16-7-2016*

ವಿಷಯ: ದಿನಾಂಕ: 16-04-2016ರಂದು ಜರುಗಿದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಕುರಿತು

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 16-04-2016ರಂದು ಜರುಗಿದ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-* *ಅನುಮೋದಿಸಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ :20/92* *ದಿನಾಂಕ:16-7-2016*

**ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ.ಆರ್.ಸಿ.ಪಾಟೀಲ ಇವರು ಈ ಕೆಳಕಂಡ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.**

**ವಿಷಯ: B.Sc Physics ವಿಭಾಗದ ವಿದ್ಯಾರ್ಥಿನಿಗೆ ಚಿನ್ನದ ಪದಕ ನೀಡುವ ಕುರಿತು.**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ 2016ರಲ್ಲಿ ನಡೆಯಲ್ಲಿರುವ ವಿಶ್ವವಿದ್ಯಾಲಯದ ಘಟಿಕೋತ್ಸದಲ್ಲಿ B.Sc Physics ವಿಭಾಗದ ವಿದ್ಯಾರ್ಥಿನಿಗೆ ಮೂರು ವರ್ಷಗಳಲ್ಲಿ ಫೇಲಾಗದೆ ಮಹಿಳಾ ವಿಶ್ವವಿದ್ಯಾಲಯಲಯಕ್ಕೆ ಸಂಯೋಜನೆಗೊಂಡ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಶೇಕಡವಾರು ಅತ್ಯಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿನಿಗೆ ಚಿನ್ನದ ಪದಕವನ್ನು ನೀಡಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-*

**ಅನುಮೋದಿಸಲಾಯಿತು. ಹಾಗೂ ಚಿನ್ನದ ಪದಕವನ್ನು ನೀಡಲು ರೂ.50,000/-ವನ್ನು ಠೇವಣಿಯಾಗಿ ಇರಿಸಿರುವ ಶ್ರೀ.ಆರ್.ಸಿ.ಪಾಟೀಲ್ ಅವರಿಗೆ ಧನ್ಯವಾದಗಳನ್ನು ಸೂಚಿಸಲಾಯಿತು. ಚಿನ್ನದ ಪದಕ ನೀಡುವ ಕುರಿತು ನಿಯಮಗಳನ್ನು ತಯಾರಿಸಲು ಸೂಚಿಸಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 01/92* *ದಿನಾಂಕ:16-7-2016*

**ವಿಷಯ:** ಸ್ನಾತಕೋತ್ತರ ಅಧ್ಯಯನ ಮಂಡಳಿಗಳನ್ನು ಪುನರಚಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 2016-17ನೇ ಸಾಲಿನಿಂದ ಮೂರು ವರ್ಷಗಳ ಅವಧಿಗೆ ವಿವಿಧ ವಿಭಾಗಗಳ ಸ್ನಾತಕೋತ್ತರ ಅಧ್ಯಯನ ಮಂಡಳಿಗಳನ್ನು ಪುನರಚಿಸಬೇಕಾಗಿರುತ್ತದೆ. ಅದರಂತೆ ಸದರಿ ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಲಾಗುವುದು. ಆದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ:-*

***ಅನುಮೋದಿಸಲಾಯಿತು.***

## *ಸಿಂಡಿಕೇಟ್ ಪುರವಣಿ ಸಂಖ್ಯೆ: 02/92* *ದಿನಾಂಕ:16-7-2016*

**ವಿಷಯ:** ದಿನಾಂಕ:04-07-2016ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ 44ನೇ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-*

**ದಿನಾಂಕ:04-07-2016ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 03/92* *ದಿನಾಂಕ:16-7-2016*

**ವಿಷಯ:** ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ ಅಂಚೆ ಶಾಖೆಯನ್ನು ತೆರೆಯುವ ಕುರಿತು.

ಉಲ್ಲೇಖ:Bjp/A-2/opening of PO/KSWU/2016 dated 15-6-2016.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಆವರಣದಲ್ಲಿ ಅಂಚೆಕಛೇರಿಯನ್ನು ತೆರೆಯಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸದರಿಯವರು ಉಲ್ಲೇಖಿತ ಪತ್ರದಲ್ಲಿ ಬಾಡಿಗೆ ರಹಿತ ಅಂಚೆಕಚೇರಿಯನ್ನು ತೆರೆಯಲು ಅನುಮತಿ ನೀಡಬೇಕೆಂದು ತಿಳಿಸಿರುತ್ತಾರೆ. ಬೋಧಕ, ಬೋಧಕೇತರ ಹಾಗೂ ವಿದ್ಯಾರ್ಥಿನಿಯರ ಹಿತದೃಷ್ಠಿಯಿಂದ ವಿಶ್ವವಿದ್ಯಾಲಯದಲ್ಲಿ ಬಾಡಿಗೆ ರಹಿತ ಅಂಚೆಕಚೇರಿಯನ್ನು ತೆರೆಯಲು ಒಪ್ಪಿದ್ದು, ಆದರೆ ಪ್ರತಿ ಮಾಹೆಗೆ ವಿದ್ಯುತ್ ಶುಲ್ಕದ ವೆಚ್ಚವನ್ನು ಅಂಚೆಕಚೇರಿಯವರೆ ಭರಿಸಬೇಕೆಂದು ಪತ್ರ ಬರೆಯಲಾಗಿದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಮಂಡಿಸಿದೆ.

*ನಿರ್ಣಯ:-*

**ವಿದ್ಯುತ್ ಶುಲ್ಕ ಮತ್ತು ನಿರ್ವಹಣೆಗಾಗಿ(Maintenance) ತಗಲುವ ವೆಚ್ಚವನ್ನು ಅಂಚೆಕಚೇರಿಯವರೆ ಭರಿಸಬೇಕೆಂಬ ಷರತ್ತಿನೊಂದಿಗೆ ಒಪ್ಪಿಕೊಳ್ಳಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

## *ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಚಾರಗಳು*

ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ.ರವೀಂದ್ರ ಭಾವಿಕಟ್ಟಿ ಅವರು ತಾವು ಕಳುಹಿಸಿದ ಅಜೆಂಡಾಗಳನ್ನು ಯಾಕೆ ಮಂಡಿಸಿಲ್ಲ ಎಂಬ ಬಗ್ಗೆ ಆಕ್ಷೇಪಣೆ ಸಲ್ಲಿಸಿದರು

1) ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯಕ್ಕೆ ನೂತನವಾಗಿ ನೇಮಕವಾಗಿರುವ ವಿಶ್ವವಿದ್ಯಾಲಯದ ಕುಲಪತಿಗಳಿಗೆ, ಕುಲಸಚಿವರಿಗೆ ಮತ್ತು ಕುಲಸಚಿವರು(ಮೌಲ್ಯಮಾಪನ) ಇವರಿಗೆ ಎಲ್ಲ ಸಿಂಡಿಕೇಟ್ ಸದಸ್ಯರು ಹೃತ್ಪೂರ್ವಕ ಸ್ವಾಗತ ಕೋರಿದರು.

   ***ಅದಕ್ಕೆ* ಮಾನ್ಯ ಕುಲಪತಿಗಳು, ಕುಲಸಚಿವರು ಮತ್ತು ಕುಲಸಚಿವರು(ಮೌ) ಇವರುಗಳು ತುಂಬು ಹೃದಯದಿಂದ ಅಭಿನಂದನೆಯನ್ನು ಸ್ವೀಕರಿಸಿದರು.**

2) ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ ಎಲ್ಲಾ ಬೋಧಕ ಸಿಬ್ಬಂಧಿ ವರ್ಗದವರು ಸರಿಯಾಗಿ ತರಗತಿಗಳನ್ನು ತೆಗೆದುಕೊಳ್ಳದೆ ಕೇವಲ ಅತಿಥಿ ಉಪನ್ಯಾಸಕರ ಮುಖಾಂತರ ತರಗತಿಗಳನ್ನು ತೆಗೆದುಕೊಳ್ಳಲು ಹಚ್ಚುತ್ತಿರುವ ಮಾಹಿತಿ ವಿವಿಧ ವಿಭಾಗದ ವಿದ್ಯಾರ್ಥಿನಿಯರಿಂದ ದೂರುಗಳು ಬಂದಿದ್ದು ಅಂತಹ ಬೋಧಕ ಸಿಬ್ಬಂದಿ ವರ್ಗದವರ ಮಾಹಿತಿಯು ಕುಲಸಚಿವರ ಗಮನಕ್ಕೆ ಬಂದಿದೆಯೊ ಹೇಗೆ? ಬಂದಿದ್ದರೆ ಅವರ ಮಾಹಿತಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸಲು ಹಾಗೂ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

   **ಮಾನ್ಯ ಕುಲಸಚಿವರಿಗೆ ಯವುದೇ ವಿದ್ಯಾರ್ಥಿನಿಯರಿಂದ ದೂರು ಬಂದಿರುವುದಿಲ್ಲವೆಂಬ ಕಾರಣದಿಂದ ಈ ಅಜೆಂಡಾವನ್ನು ತಂದಿರುವುದಿಲ್ಲ.**

3) ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ ಸರಕಾರದ ಸುತ್ತೋಲೆ ಪ್ರಕಾರ ನಿವೃತ್ತಿ ಹೊಂದಿದ ನೌಕರರನ್ನು ವಿಶ್ವವಿದ್ಯಾಲಯದಲ್ಲಿ ಯಾವುದೇ ರೀತಿ ಸೇವೆಗೆ ಅಂತಹ ನೌಕರಿದಾರರನ್ನು ತೆಗೆದುಕೊಳ್ಳಬಾರದು ಅಂತಾ ಸರಕಾರದ ಕಟ್ಟುನಿಟ್ಟಿನ ಸೂಚನೆ ಇದ್ದರು ಕೂಡಾ ನಿವೃತ್ತಿ ನೌಕರಿದಾರರನ್ನು ಸೇವೆಗೆ ತೆಗೆದುಕೊಂಡಿರುವುದು ಕಾನೂನು ಬಾಹಿರವಾಗಿರುತ್ತದೆ. ಇದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

   **ಅಂಥ ಯಾವುದೇ ನೌಕರರನ್ನು ಸೇವೆಗೆ ತೆಗೆದುಕೊಂಡಿಲ್ಲವೆಂದು ಮಾನ್ಯ ಕುಲಸಚಿವರು ತಿಳಿಸಿದರು. ಈ ವಿಷಯವನ್ನು ಕೈಬಿಡಲಾಯಿತು.**

4) 2015-16ನೇ ಸಾಲಿನ ಸಂಶೋಧನೆಗೆ (ಪಿಎಚ್.ಡಿ) ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಕೋರ್ಸ್‌ವರ್ಕ್ ತರಗತಿಗಳನ್ನು ಕೆಲವು ಪ್ರಾಧ್ಯಾಪಕರು ತರಗತಿಗಳನ್ನು ತೆಗೆದುಕೊಳ್ಳದೆ ಇರುವದು ಕಂಡುಬಂದಿದ್ದು ಅಂತವರ ಬಗ್ಗೆ ವಿಶ್ವವಿದ್ಯಾಲಯದ ಕುಲಸಚಿವರು ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂಬುದರ

ವಿವರಣೆಯನ್ನು ಪಡೆಯಲು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ ಮಂಡಿಸಲಾಗಿದೆ.

**ಈ ವಿಷಯದ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲಾಗುವುದೆಂದು ಎಂದು ಕುಲಸಚಿವರು ತಿಳಿಸಿದರು.**

ಕೊನೆಯಲ್ಲಿ ಶ್ರೀ ರವೀಂದ್ರ ಭಾವಿಕಟ್ಟಿ ಅವರು ತಾವು ಕಳುಹಿಸಿದ ಪ್ರಸ್ತಾವನೆಯನ್ನು ಮಂಡಿಸಿ, ಅವು ಸಿಂಡಿಕೇಟ್ ವ್ಯಾಪ್ತಿಯಲ್ಲಿ ಬಾರದಿದ್ದಲ್ಲಿ ಯಾವ ಕಾರಣಕ್ಕಾಗಿ ಅಜೆಂಡಾಗಳಿಗೆ ಸೇರಿಸಿಲ್ಲ ಎಂಬ ಉತ್ತರವನ್ನು ನೀಡಬೇಕಿತ್ತು ಎಂದು ಹೇಳಿದರು.

1. **ವಿಷಯ:–** ಡಾ.ಹೇಮಲತಾ.ಎಚ್.ಎಂ ಅವರನ್ನು ಸ್ನಾತಕೋತ್ತರ ಕೇಂದ್ರ, ಮಂಡ್ಯ ಇಲ್ಲಿಗೆ 2016–17ನೇ ಶೈಕ್ಷಣಿಕ ವರ್ಷಕ್ಕೆ ನಿಯೋಜಿಸುವ ಕುರಿತು.

ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಸ್ತುತ ಐದು ವಿಭಾಗಗಳಿದ್ದು, ಎಲ್ಲ ವಿಭಾಗದ(ಶಿಸ್ತಿನ) ವಿದ್ಯಾರ್ಥಿಗಳು ಮಹಿಳಾ ಅಧ್ಯಯನ ವಿಷಯವನ್ನು ಕಡ್ಡಾಯ ಪತ್ರಿಕೆಯಾಗಿ ಓದುತ್ತಿದ್ದಾರೆ. ಇದನ್ನು ಹಿರಿಯ ಮತ್ತು ಖಾಯಂ ನೆಲೆಯ ಅಧ್ಯಾಪಕರಿಂದ ನಡೆಸುವುದು ಸೂಕ್ತ. ಎರಡನೆಯದಾಗಿ ಪ್ರಸ್ತುತ ಪ್ರೊ.ಚಂದ್ರಪ್ಪ ಪ್ರಭಾರ ನಿರ್ದೇಶಕರು ಮಾತ್ರ ಮಂಡ್ಯ ಸೆಂಟರ್‌ನಲ್ಲಿ ಇರುವವರು. ಓರ್ವ ಖಾಯಂ ನೆಲೆಯ ಮಹಿಳಾ ಪ್ರಾಧ್ಯಾಪಕರು ಇರುವುದು ಅತ್ಯಂತ ಅಗತ್ಯ. 2016–17ನೇ ಶೈಕ್ಷಣಿಕ ವರ್ಷದ ಪ್ರಚಾರ ಸಮಿತಿ ಕಾರ್ಯಾರಂಭ ಮಾಡಬೇಕಿದೆ. ಆಗ ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿದರೆ ಜನಾಭಿಪ್ರಾಯ ಸ್ನಾತಕೋತ್ತರ ಕೇಂದ್ರದ ಪರವಾಗಿ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಡಾ.ಹೇಮಲತಾ ಅವರನ್ನು ಮಂಡ್ಯದ ಸ್ನಾತೋತ್ತರ ಕೇಂದ್ರಕ್ಕೆ ನಿಯೋಜಿಸುವುದು ಸೂಕ್ತ. ಇದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಬೇಕು ಎಂದು ಅಧ್ಯಕ್ಷರು ತಿಳಿಸಿದರು.

*ನಿರ್ಣಯ:–*

**ಪ್ರಸ್ತಾವಿಸಿದ ವಿಚಾರವನ್ನು ತಾತ್ವಿಕವಾಗಿ ಎಲ್ಲ ಸದಸ್ಯರು ಒಪ್ಪಿದರೂ ಡಾ.ಹೇಮಲತಾ ಎಚ್.ಎಂ. ಅವರ ಕಾರ್ಯವೈಖರಿ ಮತ್ತು ಸಿಂಡಿಕೇಟ್ ಸದಸ್ಯರೊಂದಿಗೆ ನಡೆದುಕೊಂಡ ಧೋರಣೆಗಳ ಬಗ್ಗೆ ಬಹುತೇಕ ಸದಸ್ಯರಿಂದ ಆಕ್ಷೇಪಣೆಗಳು ಬಂದವು. ಅವರನ್ನು ಕಳುಹಿಸುವುದರಿಂದ ಸಮಸ್ಯೆ ಪರಿಹಾರ ಆಗುವ ಬಗ್ಗೆ ಅನುಮಾನವನ್ನು ಸದಸ್ಯರು ವ್ಯಕ್ತಪಡಿಸಿದರು. ಹೀಗಾಗಿ ಹೇಮಲತಾ ಅವರಿಂದ ವಿವರಣೆ ಪಡೆದು, ಅವರಿಗೆ ಎಚ್ಚರಿಕೆಯನ್ನು ನೀಡಿ ಕಳಿಸುವ ಬಗ್ಗೆ ಚರ್ಚಿಸಲಾಯಿತು. ಈ ಪ್ರಕ್ರಿಯೆಗೆ ಕಾಲಾವಕಾಶ ಬೇಕಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.**

2. **ವಿಷಯ:–** ಹಣಕಾಸಿನ ವಿಭಾಗಕ್ಕೆ Financial Consultant ಆಗಿ ಇಬ್ಬರು ನಿವೃತ್ತ ಅಧಿಕಾರಿಗಳ ಸೇವೆಯನ್ನು ಬಳಸಿಕೊಳ್ಳುವ ಬಗ್ಗೆ.

ಹಣಕಾಸಿನ ವಿಭಾಗದಲ್ಲಿ ಕೆಲಸದ ಒತ್ತಡ ಅಧಿಕವಾಗಿದ್ದು, ಬಾಕಿ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲು ಮತ್ತು ವಿಭಾಗದ ನೌಕರರಿಗೆ ಆರ್ಥಿಕ ಸಲಹೆ ನೀಡಲು ಇಬ್ಬರು ನಿವೃತ್ತ ಅಧಿಕಾರಿಗಳ ಸೇವೆಯ ಅಗತ್ಯವಿದೆ. . ಮಾಸಿಕ ರೂ.15,000/–ದಂತೆ ಅವರನ್ನು ನಿಯೋಜಿಸಿಕೊಳ್ಳುವುದಕ್ಕೆ ಸಭೆಯ ಮುಂದೆ ವಿಷಯವನ್ನು ಅಧ್ಯಕ್ಷರು ಮಂಡಿಸಿದರು.

*ನಿರ್ಣಯ:–* **ಸೂಕ್ತವಾದ ವ್ಯಕ್ತಿಗಳನ್ನು ಗುರುತಿಸಿ ತೆಗೆದುಕೊಳ್ಳಲು ಸಭೆಯು ಒಪ್ಪಿಗೆ ನೀಡಿತು**

3. **ವಿಷಯ:–** ಹಣಕಾಸಿನ ಅಧಿಕಾರಿಗಳ ಬದಲಾವಣೆ ಕುರಿತು.

ಪ್ರಸುತ್ತ ಕಾರ್ಯನಿರ್ವಹಿಸುತ್ತಿರುವ ಹಣಕಾಸಿನ ಅಧಿಕಾರಿಯವರ ಕೆಲಸಗಳ ಸ್ವರೂಪದಲ್ಲಿ ಅನೇಕ ಕೊರತೆಗಳನ್ನು ಮತ್ತು ಲೋಪಗಳಿರುವುದನ್ನು ಅಧ್ಯಕ್ಷರು ವ್ಯಕ್ತಪಡಿಸಿದರು. ಹೀಗಾಗಿ ದಕ್ಷ ಮತ್ತು ಪಾರದರ್ಶಕವಾಗಿ ಕಾರ್ಯನಿರ್ವಹಿಸಬಲ್ಲ ಹಾಗೂ ಈಗಾಗಲೇ ಹಣಕಾಸಿನ ಅಧಿಕಾರಿಯಾಗಿ ದುಡಿದವರನ್ನು ನೇಮಿಸಿಕೊಳ್ಳಲು ತನಗೆ ಸಭೆಯು ಒಪ್ಪಿ, ಸಹಕರಿಸಬೇಕೆಂಬ ಪ್ರಸ್ತಾವವನ್ನು ಅಧ್ಯಕ್ಷರು ಮಂಡಿಸಿದರು.

*ನಿರ್ಣಯ:–* **ಸದಸ್ಯರು ಪ್ರಸ್ತಾವವನ್ನು ತಾತ್ವಿಕವಾಗಿ ಒಪ್ಪಿದರು. ಆದರೆ ಯಾರನ್ನು ನೇಮಿಸಿಕೊಳ್ಳಬೇಕು ಎಂಬ ಬಗ್ಗೆ ಚರ್ಚೆ ನಡೆಯಿತು. 'ವಾಣಿಜ್ಯ ಹಿನ್ನೆಲೆಯ ಅಧಿಕಾರಿ ಆಗಿದ್ದರೆ ಸೂಕ್ತ' ಎಂಬ ಅಭಿಪ್ರಾಯವನ್ನು**

**ಡಾ.ಶ್ರೀನಿವಾಸ ಬಳ್ಳಿ ಅವರು ವ್ಯಕ್ತಪಡಿಸಿದರೆ, 'ಹಗರಣಗಳಿಂದ ಮುಕ್ತರಿರುವ ವ್ಯಕ್ತಿಗಳನ್ನು ಅಧಿಕಾರಿಯಾಗಿ ನೇಮಿಸಿಕೊಳ್ಳುವುದು ಸೂಕ್ತ' ಎಂಬ ಅಭಿಪ್ರಾಯವನ್ನು ಶ್ರೀ ರವೀಂದ್ರ ಭಾವಿಕಟ್ಟಿ ಅವರು ವ್ಯಕ್ತಪಡಿಸಿದರು. ಈ ಬಗ್ಗೆ ಚರ್ಚೆ ನಡೆದು ಈ ಹಿಂದೆ ವಿಶ್ವವಿದ್ಯಾನಿಲಯದಲ್ಲಿ ಹಣಕಾಸಿನ ಅಧಿಕಾರಿಯಾಗಿ ದಕ್ಷತೆಯಿಂದ ದುಡಿದ ಪ್ರೊ.ಆರ್.ಸುನಂದಮ್ಮ ಅವರನ್ನು ಮುಂದಿನ ಹಣಕಾಸು ಅಧಿಕಾರಿಯಾಗಿ ನೇಮಿಸಿಕೊಳ್ಳಲು ಸಭೆಯು ಬಹುಮತದಿಂದ ಒಪ್ಪಿಗೆ ನೀಡಿತು.**

ಸಭೆಯ ಕೊನೆಯಲ್ಲಿ 2015–16ರ ಶೈಕ್ಷಣಿಕ ವರ್ಷದಲ್ಲಿ ಸಮಾನ ಅಂಕಗಳನ್ನು ಪಡೆದೂ ಚಿನ್ನದ ಪದಕ ವಂಚಿತರಾದ, ಕು.ಸವಿತಾ ಕುಂಬಾರ, ಕು.ಕುಪ್ಪಮ್ಮ, ಕು.ಶೃತಿ ಬಿರಾದಾರ, ಕು.ಅರ್ಚನಾ ಕಲ್ಲೂರ ಮತ್ತು ಕು.ಸೂಪ್ರಿಯಾ ವಿದ್ಯಾರ್ಥಿನಿಯರಿಗೆ, ಹಿಂದಿನ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ವಿಶ್ವವಿದ್ಯಾನಿಲಯದ ವೆಚ್ಚದಲ್ಲಿ ಚಿನ್ನದಪದಕ ಮಾಡಿಸಿ, ಸಿಂಡಿಕೇಟ್ ಸದಸ್ಯರ ಸಮಕ್ಷಮದಲ್ಲಿ ಪದಕಗಳನ್ನು ವಿತರಣೆ ಮಾಡಲಾಯಿತು.

**ಕುಲಸಚಿವರಾದ ಪ್ರೊ.ಕೆ.ಪಿ.ಶ್ರೀನಾಥ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು**
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ